III. ಗೇಣಿಯು, ಯಿಲಾಚಿ ಮತ್ತು ಮೆಣಸನ್ನು ಜಮಾಯಿಸುವದಕ್ಕೂ ವತ್ತು ಅವುಗಳನ್ನು ಸಾಗುವಳಿ ಮಾಡುವದಕ್ಕೂ ಮಾತ್ರವೇ ಆಗಿರುವದರಿಂದ, ಇನ್ಯಾವ ತರಹೆಯ ಇತರ ಫಸಲಾಗಲೀ ಗೇಣಿಗೆ ಪಡೆದಿರುವ ಫಾರೆಸ್ಟಿನಲ್ಲಿ ಸಾಗುವಳಿ ಮಾಡಲ್ಪಡಕೂಡದು, ಪರಂತು ಯಿಲಾಚಿ ಗಿಡಗಳಿಗೂ ಮೆಣಸಿನ ಬಳ್ಳಿಗಳಿಗೂ ನೆರಳಿಗೋಸ್ಕರ ಅವಶ್ಯಕವಾದ ಬೂಳಿ ಹರಳು ಯಾ ಇತರ ಮರಗಳು ಬೆಳಿಸಕೂಡದೆಂದು ಅರ್ಥವಾಗತಕ್ಕದ್ದಲ್ಲಾ.

IV. ಫಾರೆಸ್ಟು ಆಫೀಸರರ ಬರಹಮೂಲಕವಾದ ಅಪ್ಪಣೆ ವಿನಾ ಯಾವವಿಧವಾದ ಮರವೇಆಗಲೀ ಕಡಿಯಲ್ಪಡಕೂಡದು; ಮತ್ತು ಗೇಣಿಗೆ ಕೊಡಲ್ಪಟ್ಟ ಫಾರೆಸ್ಟುಗಳಿಂದ ಯಾವ ಇಲಾಚಿಗಿಡಗಳಾಗಲಿ ಮೆಣಸಿನಬಳ್ಳಿಯಾಗಲಿ ಯಾವ ಸಂದರ್ಭಗಳಲ್ಲೂ ಆಗೆದು ಆಚಿಗೆ ಸಾಗಿಸಲ್ಪಡಕೂಡದು. ಯಿಲಾಚಿ ಗಿಡಗಳ ಮತ್ತು ಮೆಣಸಿನಬಳ್ಳಿಗಳ ಬೆಳವಣಿಗೆ ಯಾ ಅಭಿವೃದ್ಧಿಗೋಸ್ಕರವೇ ಜಮೀನನ್ನು ಬೈಲ್ ಮಾಡುವದಕ್ಕಾಗಿ ಯಾವದಾದರೂ ಮರಗಳನ್ನು ಕತರಾಯಿಸುವದು ಅವಶ್ಯಕವಾದಾಗ ಗೇಣಿದಾರನು ಫಾರೆಸ್ಟು ಆಫೀಸರರಿಗೆ ಬರೆದು ಕೊಳ್ಳತಕ್ಕದ್ದು, ಅವರು ಕತರಾಯಿಸಲ್ಪಡಬೇಕಾದ ಮರಗಳನ್ನು ಗುರ್ತು ಮಾಡತಕ್ಕದ್ದು ಮತ್ತು ಹಾಂಗೆ ಕತರಾಯಿಸಲ್ಪಟ್ಟ ಮರಗಳು ಫಾರೆಸ್ಟು ಇಲಾಖೆಯವರಿಂದ ಸ್ವಾಧೀನಕ್ಕೆ ತೆಗೆದುಕೊಳ್ಳಲ್ಪಡತಕ್ಕದ್ದು. ಗೇಣಿದಾರನು ಸದರೀ ಮರಗಳ ಪೈಕಿ ಯಾವದನ್ನಾದರೂ ಅಪೇಕ್ಷಿಸಿದರೆ, ಇದರಡೀ ಕಂಡ ಗೊತ್ತಾದ ಸೀನಿಯರೇಜ್ ಯಾನೆ ತೀರ್ವೆ ದರಗಳು ಯಾ ಡಿಪ್ಯೂಟಿ ಕಮ್ಮಿಷನರವರ ಯುಕ್ತನುಸಾರ ಯಿನ್ನೂ ಕಮ್ಮಿಯಾದ ದರಗಳು ಪಾವತೀ ಮಾಡಲ್ಪಟ್ಟ ತರುವಾಯ ಕೊಡಲ್ಪಡತಕ್ಕದ್ದು:—

| | | ರೂ. |
|---|---|---|
| ಪ್ಯೂ | ದರಮರ ವಂದಕ್ಕೆ | 15 |
| ಹೆಸವಾ | ಡಿಟೋ | 10 |
| ಕರೀಮರ | ಡಿಟೋ | 8 |
| ನಂದಿ | ಡಿಟೋ | 8 |
| ಹೆಜನಿ | ಡಿಟೋ | 6 |
| ಯಬನಿ | ಡಿಟೋ | 10 |
| ಇತರ ತಮಾಂ ತರಹೆಯ ಮರಗಳೂ | ಡಿಟೋ | $3\frac{1}{2}$ |
| ಬೊಂಬುಗಳು | ದರ 100ಕ್ಕೆ | 10 |

V. ಗೇಣಿದಾರನು, ಇಲಾಚಿ ಮತ್ತು ಮೆಣಸು ವಿನಾ ಇತರ ಯಾವ ಫಾರೆಸ್ಟು ಹುಟ್ಟುವಳಿಗಾಗಲೀ ಹಕ್ಕುದಾರನಾಗಿರುವದಿಲ್ಲಾ, ಮತ್ತು ಫಾರೆಸ್ಟುಗಳು ವ ಪ್ಲಾಂಟೇಷ್ಣಗಳಲ್ಲಿರತಕ್ಕ ರಸ್ತೆಗಳನ್ನು ಆವರಣಿಸುವದಕ್ಕಾಗಲಿ, ನಿರೋಧಪಡಿಸುವದಕ್ಕಾಗಲಿ ಯಾ ಮತ್ಯಾವ ವಿಧವಾಗಿಯಾದರೂ ಆಟಂಕಪಡಿಸುವದಕ್ಕಾಗಲೀ ಗೇಣಿದಾರಗೆ ಸ್ವತಂತ್ರ ವಿರುವದಿಲ್ಲಾ; ಮತ್ತು ಗವರ್ಮೆಂಟಿನವರು ಅಂಥಾ ತಮಾಂ ಫಾರೆಸ್ಟು ವ ಪ್ಲಾಂಟೇಷ್ಣಗಳಲ್ಲಿಯು ಯಾವ್ ತರಹೆಯ ಪೂರ್ತಿಯಾದ ಹಕ್ಕುದಾರಿಗಳನ್ನೂ ತಾವೆ ಉಳಿಸಿಕೊಂಡಿರುತ್ತಾರೆ.

VI. ಈ ರೂಲ್ಸ್ ಅನುಸರಿಸಿ ಪಡೆದ ಇಲಾಚಿ ವ ಮೆಣಸಿನ ಗೇಣಿಯು ಗೇಣೀದಾರನ ಯಿಷ್ಟಾನುಸಾರ ವಿಕ್ರಯಿಸಲ್ಪಡಬಹುದು ಯಾ ಅನ್ಯಥಾ ಪರಭಾರೆ ಮಾಡಲ್ಪಡಬಹುದು, ಪರಂತು ಅಂಥಾ ಪರಭಾರೆಯ ವರ್ತಮಾನವು ಡಿಪ್ಯೂಟಿ ಕಮ್ಮಿಷನರವರಿಗೆ ಅವರ ಆಫೀಸಿನಲ್ಲಿ ದಾಖಲೆ ಬಗ್ಯಾಗಿ ಕೊಡಲ್ಪಡತಕ್ಕದ್ದು, ಮತ್ತು ಗೇಣಿಯ ಪರಭಾರೆಯು ರೆಜಿಸ್ಟ್ರೇಷ್ಣ ಆಕ್ಟಿನ ನಿಯಮಗಳನ್ನನುಸರಿಸಿ ಕ್ರಮವಾಗಿ ರಿಜಿಸ್ಟ್ರು ಮಾಡಲ್ಪಡತಕ್ಕದ್ದು.

ಯಲ್. ರಿಕ್ಕೆಟ್ಸ್,
ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್.

---

## ಅಂಚೇ ಇಲಾಖಾ.

ನಂಬರ್ 167—92. ತಾರೀಖು 28ನೇ ಜುಲೈ 1887.

ಇದರಿಂದ ಸಕಲಜನಗಳಿಗೂ ತಿಳಿಯುವ ಬಗ್ಯೆ ಪ್ರಕಟಿಸಲ್ಪಡುವದೇನಂದರೆ, ಮೈಸೂರ ಶ್ರೀಮನ್ ಮಹಾರಾಜ ರಾಜಾಸಾಹೇಬ್ ಬಹದೂರವರೆ ದಿವಾನರವರ ಅಪ್ಪಣೆ ಅನುಸರಿಸಿ ಈ ಕೆಳಗೆ ಕಂಡ ಸ್ಥಳಗಳೊಳಗೆ ಹೋಬಳಿ ಅಂಚೇ ಆಫೀಸುಗಳು ಸ್ಥಾಪಿಸಲ್ಪಟ್ಟಿವೆ ಯಿರುತ್ತೆ:—

| ತಾಲ್ಲೂಕು. | ಅಂಚೇ ಆಫೀಸು ಸ್ಥಾಪಿಸಲ್ಪಟ್ಟ ಸ್ಥಳದ ಹೆಸರು. |
|---|---|
| ನೆಲಮಂಗಲ | ಯಲಕ್ಕಾತನಹಳ್ಳಿ. |
| ಮಾಗಡಿ | ತಿಪ್ಪಸಂದ್ರ |

| ತಾಲ್ಲೂಕು. | | ಅಂಚೇ ಆಫೀಸ್ ಸ್ಥಾಪಿಸಲ್ಪಟ್ಟ ಸ್ಥಳದ ಹೆಸರು. |
|---|---|---|
| ಮದ್ದಗಿರಿ | ... | ಹೊಳವನಹಳ್ಳಿ |
| ಮಂಜರಾಬಾದ್ | .. | ವುದೇವಾರ |
| ಡಿಟೋ | .. | ಮಾರ್ನಹಳ್ಳಿ |
| ತುಮಕೂರು | .. | ಬೆಳಧರ |

ಬಿ. ಮರಿಗಂಗಯ್ಯ,
ಅಂಚೇ ಬಕ್ಷಿ.

## ಬೆಂಗಳೂರು ಡಿಸ್ಟ್ರಿಕ್ಟ್.

### ಬೆಂಗಳೂರು ಸಬ್ ಜಡ್ಜೀಯವರ ಕೋರ್ಟಿನಲ್ಲಿ.

1887ನೇ ಇಸವಿ ಮಿಸಲೇನಿಯಸ್ ಅರ್ಜಿ ನಂಬರ್.

ನೆಲಮಂಗಲ ತಾಲ್ಲೂಕು ಬೇಗೂರಲ್ಲಿದ್ದು ಮೃತಪಟ್ಟ ಹನುಮಯ್ಯನ ಆಸ್ತೀ ವಿಷಯದಲ್ಲಿ—

ಅರ್ಜಿದಾರಳು ಡಿಟೋ ಬೇಗೂರಲ್ಲಿ ಇರುವ ತೆಲಗರ ಹನುಮಯ್ಯನ ಹೆಂಡತಿ ರಂಗಮ್ಮ, ಮೃತಪಟ್ಟ ಸದರೀ ಹನುಮಯ್ಯನಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರೀ ಮೇಲೆ ಬೇಗೂರು ಸ್ಥಳದ ರಂಗಮ್ಮನು ಸದರೀ ವಾಸಸ್ಥನಾಗಿ ಮೃತಪಟ್ಟ ಹನುಮಯ್ಯನ ಜಿಂದಗಿ ಬಗ್ಯಾಗಿ ಬರತಕ್ಕ ಸೂಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ರಂಗಮ್ಮನ ಅರ್ಜಿಯನ್ನು 1887ನೇ ಇಸವಿ ಜುಲೈ ತಿಂಗಳು ತಾರೀಖು 29ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಹನುಮಯ್ಯನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

---

1887ನೇ ಇಸವಿ ಮಿ|| ಅರ್ಜೀ ನಂಬರ್ 571.

ಚಿಕ್ಕಬಳ್ಳಾಪುರ ತಾಲ್ಲೂಕು ಕಳವರದಲ್ಲಿದ್ದು ಮೃತಪಟ್ಟ ಮಂಚಗಾನಹಳ್ಳಿ ನರಸಂಣನ ಆಸ್ತೀ ವಿಷಯದಲ್ಲಿ—

ಅರ್ಜೀದಾರಳು ಡಿಟೋ ಕಳವರದಲ್ಲಿ ಇರುವ ಮಂಚಗಾನಹಳ್ಳಿ ನರಸಂಣನ ಮಗಳು ನರಸಮ್ಮ, ಮೃತಪಟ್ಟ ಸದರೀ ನರಸಂಣನಿಗೆ ಮಗಳು ಆಗಬೇಕೆಂಬ ಹಕ್ಕುದಾರೀ ಮೇಲೆ ಕಳವರ ಸ್ಥಳದ ನರಸಮ್ಮನು ಡಿಟೋ ವಾಸಸ್ಥನಾಗಿ ಮೃತಪಟ್ಟ ನರಸಂಣನ ಜಿಂದಗಿ ಬಗ್ಯಾಗಿ ಬರತಕ್ಕ ಸೂಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ನರಸಮ್ಮನ ಅರ್ಜಿಯನ್ನು 1887ನೇ ಇಸವಿ ಆಗಸ್ಟು ತಿಂಗಳು ತಾರೀಖು 12ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನರಸಂಣನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಯಿದರಿಂದ ತಿಳಿಯಪಡಿಸಿ ಯಿದೆ.

1887ನೇ ಇಸವಿ ಜುಲೈ ತಿಂಗಳು 13ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

---

1887ನೇ ಇಸವಿ ಮಿ|| ಅರ್ಜೀ ನಂಬರ್ 573.

ಬೆಂಗಳೂರು ತಾಲ್ಲೂಕು ವರ್ತೂರಲ್ಲಿದ್ದು ಮೃತಪಟ್ಟ ಬಾಲಪ್ಪನ ಆಸ್ತೀ ವಿಷಯದಲ್ಲಿ—

ಅರ್ಜೀದಾರಳು ಡಿಟೋ ವರ್ತೂರಲ್ಲಿರುವ ಮುನಿಯಕ್ಕ, ಮೃತಪಟ್ಟ ಸದರೀ ಬಾಲಪ್ಪನಿಗೆ ತಾಯಿ ಆಗಬೇಕೆಂಬ ಹಕ್ಕುದಾರೀ ಮೇಲೆ ವರ್ತೂರು ಸ್ಥಳದ ಮುನಿಯಕ್ಕನು ಸದರೀ ವಾಸಸ್ಥನಾಗಿ ಮೃತಪಟ್ಟ ಬಾಲಪ್ಪನ ಜಿಂದಗಿ ಬಗ್ಯಾಗಿ ಬರತಕ್ಕ ಸೂಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ಮುನಿಯಕ್ಕನ ಅರ್ಜೀಯನ್ನು 1887ನೇ ಇಸವಿ ಆಗಸ್ಟು ತಿಂಗಳು ತಾರೀಖು 5ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಬಾಲಪ್ಪನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಯಿದೆ.